ಆಫೀಸಿನಲ್ಲಿ ರೆವಿನ್ಯೂ ಇನ್ಸ್‌ಪೆಕ್ಟರ್ ಕೆಲಸ ಮುಖ್ಯವಾದುದು ಆದನ್ನು ಮುಂದುವರೆಸುವುದು, ಮತ್ತು ತಾಲ್ಲೂಕು ಆಫೀಸ್ ಸಿಬ್ಬಂದಿ, ಮ್ಯಾಜಿಸ್ಟ್ರೇಟ್ ಪವರ್ ಬಿಟ್ಟು ಇತರೆ ಅಧಿಕಾರವನ್ನು ಅವರಿಂದ ತಡೆದಲ್ಲಿ ನಾಡ ಪದ್ಧತಿ ವಿಶ್ರಾವಾಗುವುದೆಂದು ಈ ಸಮನ್ವಯ ಸಭೆಯು ಗಮನಕ್ಕೆ ತರಲು ಇಚ್ಛಿಸುತ್ತೇನೆ.

ಶ್ರೀ ಎಸ್.ಆರ್. ಬೊಮ್ಮಾಯಿ.—ಈಗಾಗಲೇ ಅಧಿಕಾರವನ್ನು ಕೊಟ್ಟಿದ್ದೇವೆ. ಇನ್ನೂ ಹೆಚ್ಚಿನ ಅಧಿಕಾರ ಕೊಡತಕ್ಕಂತಹ ವಿಚಾರ ಪರಿಶೀಲನೆಯಲ್ಲಿದೆ. ಈ ಬಗ್ಗೆ ಮಾನ್ಯ ಸದಸ್ಯರು ಸಲಹೆಯನ್ನು ಕೊಟ್ಟಿದ್ದಾರೆ ಅದರ ಬಗ್ಗೆ ವಿಚಾರ ಮಾಡುತ್ತೇನೆ.

ಅಧ್ಯಕ್ಷರು.—ಶ್ರೀ ಕೆ.ವೆಂಕಟೇಶ್ (ಮಾನ್ಯ ಸದಸ್ಯರು ಗೈರು ಹಾಜರು)

VI ಕಾಪು ಕ್ಷೇತ್ರದಲ್ಲಿ ಹಲವಾರು ಆರೋಗ್ಯ ಕೇಂದ್ರಗಳಲ್ಲಿ ವೈದ್ಯಾಧಿಕಾರಿ ಹಾಗೂ ಇತರೆ ಸಿಬ್ಬಂದಿ ವರ್ಗ ಇಲ್ಲದಿರುವ ಬಗ್ಗೆ

ಶ್ರೀ ವಸಂತ ವಿ. ಸಾಲಿಯಾನ.—ಮಾನ್ಯ ಅಧ್ಯಕ್ಷರೇ, ಕಾಪು ಕ್ಷೇತ್ರದ ಹಲವಾರು ಆರೋಗ್ಯ ಕೇಂದ್ರಗಳಲ್ಲಿ ವೈದ್ಯಾಧಿಕಾರಿ ಹಾಗೂ ಇತರ ಸಿಬ್ಬಂದಿ ವರ್ಗದವರು ಇಲ್ಲದಿರುವುದನ್ನು ಸರಕಾರದ ಗಮನಕ್ಕೆ ತಂದರೂ ಈ ತನಕ ಭರ್ತಿ ಮಾಡಿಲ್ಲ. ಇದರಿಂದ ಗ್ರಾಮಾಂತರ ಪ್ರದೇಶದ ಜನರಿಗೆ ತುಂಬಾ ತೊಂದರೆಯಾಗಿದೆ. ಕೆಲವು ಆರೋಗ್ಯ ಕೇಂದ್ರಗಳಲ್ಲಿ ಸರಿಯಾಗಿ ಮದ್ದು ಮತ್ತು ಇತರ ಉಪಕರಣಗಳೂ ಸಹ ಇಲ್ಲದೆ ತೊಂದರೆಯಾಗಿದೆ. ಈ ವಿಚಾರದಲ್ಲಿ ಅನೇಕ ಬಾರಿ ವಿಧಾನ ಸಭೆಯಲ್ಲೇ ಸರಕಾರದ ಗಮನಕ್ಕೆ ತಂದರೂ ಯಾವ ರೀತಿಯ ಕ್ರಮವನ್ನೂ ಈ ತನಕ ತೆಗೆದುಕೊಂಡಿಲ್ಲ. ಈ ಕೂಡಲೇ ಕ್ರಮ ತೆಗೆದುಕೊಳ್ಳಬೇಕಾಗಿ ಸರಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಹೆಚ್.ಟಿ. ಕೃಷ್ಣಪ್ಪ.—ಇದರ ಬಗ್ಗೆ ನಾಳೆ ಅಥವಾ ನಾಡಿದ್ದು ಹೇಳುತ್ತೇನೆ.

ಶ್ರೀ ವಸಂತ ವಿ. ಸಾಲಿಯಾನ.—ಈ ವಿಚಾರದಲ್ಲಿ ಹಲವಾರು ಬಾರಿ ಹೇಳಿದ್ದೇನೆ. ನಿನ್ನೆ ಹೇಳಿದ್ದೇನೆ. ನಮಗೆ ಉತ್ತರ ಬೇಕು. ಈ ಬಗ್ಗೆ ಆರನೆಯ ಬಾರಿ ಈ ಸದನದಲ್ಲಿ ಕೇಳುತ್ತಿದ್ದೇನೆ.

(ಗೊಂದಲ)

ಅಧ್ಯಕ್ಷರು.—ತಾವು ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಧರ್ಮಸಿಂಗ್ ನಾರಾಯಣಸಿಂಗ್.—ಆರನೇ ಬಾರಿ ಕೇಳುತ್ತಿದ್ದಾರೆ. ನಾವು ಏಕೆ ಇಲ್ಲಿ ಕೂಡಬೇಕು.

(ಗೊಂದಲ)

ಅಧ್ಯಕ್ಷರು.—ರಿಸ್ಟ್ರಿಕ್ಷನ್ ಮಾಡಬೇಕಾಗುತ್ತದೆ. ಬಿಸಿನೆಸ್ ಅಡ್ವೈಜರಿ ಕಮಿಟಿಯಲ್ಲಿ ೫-೧೦ ವಿಷಯಗಳನ್ನು ಇಡಬೇಕೆಂದು ಇದೆ. ಇದು ಎಲ್ಲರಿಗೂ ಗೊತ್ತಿದೆ.

(ಗೊಂದಲ)

ಶ್ರೀ ವಸಂತ ವಿ. ಸಾಲಿಯಾನ.—೧೯೮೩ರಿಂದ ಕೇಳುತ್ತಿದ್ದೇನೆ. ಈ ತನಕ ಉತ್ತರ ಸಿಕ್ಕಿಲ್ಲ.

ಅಧ್ಯಕ್ಷರು.—ಎಲ್ಲಾ ಊರಿಗೆ ಹೋದ ಮೇಲೆ ೪೫ ಜನಕ್ಕೆ ಉತ್ತರ ತರಿಸಿ ಕೊಟ್ಟಿದ್ದೇನೆ.

ಶ್ರೀ ಹೆಚ್.ಟಿ. ಕೃಷ್ಣಪ್ಪ.—ಅವರು ನಿನ್ನೆಯ ದಿವಸ ನೋಟೀಸ್ ಕೊಟ್ಟಿದ್ದಾರೆ, ಅದರ ಪ್ರತಿ ಈಗ ತಲುಪಿದೆ. ಅದಕ್ಕೆ ಸಮಯಾವಕಾಶ ಕೊಟ್ಟರೆ ಉತ್ತರ ಒದಗಿಸುತ್ತೇನೆ. ಅವರು ಏನು ತೊಂದರೆಯ ಬಗ್ಗೆ ಸರ್ಕಾರದ ಗಮನಕ್ಕೆ ತಂದಿದ್ದಾರೆಂದು ಯೋಚನೆ ಮಾಡಿ ಉತ್ತರ ಕೊಡಬೇಕು.

ಅಧ್ಯಕ್ಷರು.—ಈ ರೀತಿ ಸಿಟ್ಟಿಗೆದ್ದು ಮಾತನಾಡಿದರೆ ಅದರಿಂದ ಏನೂ ಉಪಯೋಗವಾಗುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಕೃಷ್ಣಪ್ಪನವರು ಹೊಸದಾಗಿ ಸಚಿವರಾಗಿದ್ದಾರೆ. ಮಾನ್ಯ ಸದಸ್ಯರು ಆನೇ ಸಾಲಿನಿಂದ ಕೇಳುತ್ತಲೇ ಇದ್ದಾರೆ. ಶಾಸಕರ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ೫-೬ನೇ ಸಾರಿ ಕೇಳುತ್ತಿದ್ದಾರೆ. ಇಪತ್ತೈದನೆಯವರಿಗೂ ಪ್ರಶ್ನೆಗೆ ಉತ್ತರ ಬಂದಿಲ್ಲ ಎಂದರೆ ಇಲಾಖೆ ಏನು

ಮಾಡುತ್ತಿದೆ ? ಸಚಿವರು ಬದಲಾವಣೆಯಾಗಬಹುದು. ಶಾಸಕರು ಕೇಳಿದಂಥ ವಿಷಯಗಳಿಗೆ ಇಲಾಖೆಯವರು ಗಮನಕೊಡದೇ ಹುಲಿಗಿ ಬಿಟ್ಟರೆ ಪರಿಸ್ಥಿತಿ ಏನಾಗುತ್ತದೆ ?

ಅಧ್ಯಕ್ಷರು.—ಮಾನ್ಯ ಬಂಗಾರಪ್ಪನವರೇ, ಪ್ರತಿಯೊಬ್ಬ ಸದಸ್ಯರ ಹೆಸರಿನಲ್ಲಿಯೂ ಪ್ರತ್ಯೇಕವಾಗಿ ಫೈಲು ತೆರೆದು, ಉತ್ತರ ತರಿಸಿಕೊಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇನೆ. ಮಾನ್ಯ ಸದಸ್ಯರುಗಳು ಸದನೆಯಿಂದ ವರ್ತಿಸಬೇಕು.

ಶ್ರೀ ಎಸ್. ಬಂಗಾರಪ್ಪ.—ಅಷ್ಟಿನೇ ಸಾಲಿನಿಂದ ಅವರು ಕೇಳುತ್ತಲೇ ಬಂದಿದ್ದಾರೆ ತಾವು ಮಾನ್ಯ ಸದಸ್ಯರ ಸಹನೆಯನ್ನು ಕೂಡ ಮೆಚ್ಚಬೇಕಾಗುತ್ತದೆ.

ಅಧ್ಯಕ್ಷರು.—ಯಾವ ತಾಲ್ಲೂಕಿನಲ್ಲಿಯೂ ವೈದ್ಯರುಗಳು ಇಲ್ಲ. ಇದರ ಬಗ್ಗೆ ಬಿಗಿಯಾದ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಹೆಚ್.ಟಿ. ಕೃಷ್ಣಪ್ಪ.—ಸ್ವಾಮಿ, ಯಾವ ಆಸ್ಪತ್ರೆಗಳಲ್ಲೂ ವೈದ್ಯರಿಲ್ಲದೆ ಅವು ಮುಂದು ವರಿಯಬಾರದೆಂಬುದನ್ನು ಸರ್ಕಾರ ಒಪ್ಪುತ್ತದೆ. ದುರಾದೃಷ್ಟವಶಾತ್ ಇವೊತ್ತು ಗ್ರಾಮೀಣ ಪ್ರದೇಶಗಳಿಗೆ ವೈದ್ಯರುಗಳನ್ನು ವರ್ಗ ಮಾಡಿದಂಥ ಸಂದರ್ಭದಲ್ಲಿ ವಿರೋಧಪಕ್ಷದ ಸದಸ್ಯರುಗಳು ಕೂಡ ವರ್ಗ ಮಾಡಿದ್ದನ್ನು ರದ್ದು ಮಾಡಿಸುವುದರ ಬಗ್ಗೆ ಬದಲಾವಣೆ ಮಾಡಿಸುವುದರ ಬಗ್ಗೆ ಪ್ರಯತ್ನ ಮಾಡುತ್ತಿರುವುದನ್ನು ಬಿಡಬೇಕಾಗುತ್ತದೆ. ನಮ್ಮ ನೆಂಟ ಹಳ್ಳಿಯಲ್ಲಿದ್ದರೆ ಆತನನ್ನು ಹೇಗಾದರೂ ಮಾಡಿ ಮೈಸೂರು ಬೆಂಗಳೂರು ನಗರಗಳಿಗೆ ಹಾಕಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡಲಾಗುತ್ತಿದೆ. ಈ ವಿಚಾರದಲ್ಲಿ ಈ ಮಾನ್ಯಸದಸ್ಯರುಗಳು ಸಹಕಾರ ನೀಡಿದರೆ ವೈದ್ಯರುಗಳನ್ನು ಗ್ರಾಮೀಣ ಪ್ರದೇಶಗಳಿಗೆ ಹಾಕುವುದರಲ್ಲಿ ವಿಳಂಬವಾಗುವುದಿಲ್ಲ.

ಅಧ್ಯಕ್ಷರು.—ವೈದ್ಯರುಗಳು ಹಳ್ಳಿಗಳಿಗೆ ಹೋಗುವುದಕ್ಕೆ ತಯಾರಿಲ್ಲ.

ಶ್ರೀ ಹೆಚ್.ಟಿ. ಕೃಷ್ಣಪ್ಪ.—ನಿಮ್ಮ ಸಲಹೆ ಅಂಗೀಕಾರಾರ್ಹವಾದುದು. ಆದರ ಬಗ್ಗೆ ಭಿನ್ನಾಭಿಪ್ರಾಯ ಇಲ್ಲ. ವೈದ್ಯರುಗಳನ್ನು ವರ್ಗ ಮಾಡಿದಾಗ ಶಾಸಕರುಗಳಾದವರು ಮಧ್ಯ ಬರುವುದರಿಂದ ಇಂಥ ಪರಿಸ್ಥಿತಿ ನಿರ್ಮಾಣವಾಗುತ್ತದೆ.

ಶ್ರೀ ಎ. ಲಕ್ಷ್ಮೀಸಾಗರ್.—ಸ್ವಾಮಿ, ಯಾವುದೇ ಪ್ರಶ್ನೆ ಬಂದರೂ ಕೂಡ ಅದರ ಬಗ್ಗೆ ವಾಖ್ಯಾನ ಮಾಡುವುದಕ್ಕೆ ಮಾನ್ಯ ಬಂಗಾರಪ್ಪನವರು ಪ್ರಯತ್ನ ಮಾಡುತ್ತಾರೆ. ನೀವು ಹೇಳಿದ್ದೀರಿ. ಸರ್ಕಾರದ ಪರವಾಗಿ ನಾನು ಕೂಡ ಹೇಳಿದ್ದೇನೆ. ಪ್ರಶ್ನೆಯೊಂದಕ್ಕೂ ವ್ಯಾಖ್ಯಾನ ಮಾಡುತ್ತಾ ಹೋದರೆ. ಸದನದ ಕಾರ್ಯಕಲಾಪಗಳನ್ನು ನಡೆಸುವಂಥ ವಿಧಾನ ಹೇಗೆ ? ತಾವು ಇದನ್ನು ಬಿಗಿ ಮಾಡಬೇಕಾಗುತ್ತದೆ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಅಧ್ಯಕ್ಷರೇ, ಮಂತ್ರಿಗಳು ಎನ್ನುವಷ್ಟಕ್ಕೆ ಅರಿವು ಅವರಿಗೆ ಇಲ್ಲ. ಸದಸ್ಯರುಗಳು ಇಲ್ಲಿ ಏತಕ್ಕೆ ಬಂದಿದ್ದಾರೆ? ನಮ್ಮ ಆಸ್ಪತ್ರೆಯಲ್ಲಿ ಮೂರು ವರ್ಷಗಳಿಂದ ವೈದ್ಯರುಗಳು ಇಲ್ಲ ಯಾರನ್ನಾದರೂ ಹಾಕಿ ಎಂದು ಕೇಳುತ್ತಿದ್ದಾರೆ. ಮಾನ್ಯ ಲಕ್ಷ್ಮೀಸಾಗರ್‌ರವರು ನಾಳೆ ಉತ್ತರ ಕೊಡುತ್ತೇನೆ, ನಾಡಿದ್ದು ಉತ್ತರ ಕೊಡುತ್ತೇನೆಂದು ಹೇಳುವುದಾದರೆ ಇಲ್ಲಿ ಸಭೆ ಏತಕ್ಕೆ ಬೇಕು ? ಈ ರೀತಿ ಸರ್ಕಾರದವರು ಉತ್ತರ ಕೊಡುವುದಾದರೆ ನಾವು ಕೆಲಸ ಮಾಡುವುದಾದರೂ ಹೇಗೆ ? ನಮ್ಮ ನಮ್ಮ ತಾಲ್ಲೂಕಿನ ಕ್ಷೇತ್ರದಲ್ಲಿ ಬೇಕಾದಷ್ಟು ಕಷ್ಟಗಳು ಇವೆ, ಸಂಕಟಗಳು ಇವೆ. ಈ ರೀತಿ ಬೇಜವಾಬ್ದಾರಿಯಿಂದ ಮಂತ್ರಿಗಳು ನಡೆದುಕೊಳ್ಳುವುದು ಸರಿಯಲ್ಲ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಮಂತ್ರಿಗಳಾದ ಕೃಷ್ಣಪ್ಪನವರು ಕಾಲವನ್ನು ತೆಗೆದು ಕೊಂಡು ಸೋಮವಾರವೇ ಉತ್ತರ ಕೊಡಲಿ. ಗ್ರಾಮೀಣ ಪ್ರದೇಶಗಳಿಗೆ ವೈದ್ಯರುಗಳನ್ನು ಹಾಕತಕ್ಕ ವಿಚಾರದಲ್ಲಿ ವಿರೋಧ ಪಕ್ಷದ ಮಾನ್ಯ ಸದಸ್ಯರುಗಳು ಇರಬಹುದು ಯಾರಾದರೂ ಇರಬಹುದು ನಿಮಗೆ ನಿಜವಾಗಿಯೂ ಹಳ್ಳಿಗಾಡುಗಳಿಗೆ ವೈದ್ಯರುಗಳನ್ನು ಹಾಕುವ ಮನಸ್ಸು ಇದ್ದರೆ ಹಾಕಿ ವಿರೋಧಪಕ್ಷದ ಪರವಾಗಿ ಸಂಪೂರ್ಣ ಹಕ್ಕನ್ನು ನಾನು ನಿಮಗೆ ಕೊಡುತ್ತೇನೆ. ನಿಮಗೆ ಇರತಕ್ಕ ಸಂಬಂಧೀಕರನ್ನು ಸೇರಿಸಿ ಹಳ್ಳಿಗಾಡಿಗೆ ಹಾಕಿ ಈ ವಿಚಾರದಲ್ಲಿ ಯಾರೂ ಅಡ್ಡಿ ಬರುವುದಿಲ್ಲ. ಶ್ರೀಮಾನ್ ಲಕ್ಷ್ಮೀಸಾಗರ್‌ರವರು ಪದೇ ಪದೇ ನಿಂತುಕೊಂಡು ಉತ್ತರ ಕೊಡತಕ್ಕ ಹಕ್ಕನ್ನು ಪಡೆದಿದ್ದಾರೆ ಇದನ್ನು ಕೊಟ್ಟಿದ್ದೆ ತಪ್ಪಾಯಿತೇನೋ ? ವಿರೋಧ ಪಕ್ಷದ ಸದಸ್ಯರ ಹಕ್ಕನ್ನು ಪ್ರತಿಪಾದನೆ ಮಾಡತಕ್ಕ

ಸಂದರ್ಭದಲ್ಲಿ ಸಭಾಧ್ಯಕ್ಷರ ಅನುಮತಿ ಪಡೆದು ವಿಷಯವನ್ನು ಹೇಳುತ್ತಿದ್ದೇವೆ. ಆದರಿಂದ ತಮ್ಮ ಮನಸ್ಸಿಗೆ ನೋವಾಗಿದ್ದರೆ, ನಾನು ಸಂತೋಷಪಡುತ್ತೇನೆ. ಆದರೆ, ವಿರೋಧಪಕ್ಷದ ಸದಸ್ಯರ ಹಕ್ಕುಗಳನ್ನು ಮೊಟಕುಗೊಳಿಸತಕ್ಕ ತಮ್ಮ ಮಾತಿನ ಸರಣಿ ಬಗ್ಗೆ ನಾನು ಎಚ್ಚರಿಕೆ ಕೊಡುತ್ತೇನೆ. ನೀವು ಕೂಡ ಪದೇ ಪದೇ ಉತ್ತರ ಕೊಡುತ್ತಿದ್ದೀರಿ. ನೀವು ಇಲ್ಲಿ ಯಾರಿಗೂ ಬುದ್ಧಿವಾದ ಹೇಳಬೇಕಾಗಿಲ್ಲ. ನಿಮ್ಮ ಪ್ರೊಫೆಸರ್ ಗಿರಿ ಏನಿದ್ದರೂ ಕಾಲೇಜಿನಲ್ಲಿ ನಡೆಯಲಿ ಇಲ್ಲಿ ನಡೆಯುವುದಕ್ಕೆ ಬಿಡುವುದಿಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ಸರ್ಕಾರದ ಪರವಾಗಿ ಉತ್ತರ ಕೊಡುವುದಕ್ಕೆ ಸಂವಿಧಾನದಲ್ಲಿ ಅವಕಾಶ ಇದೆ, ಕಾನೂನಿನಲ್ಲಿ ಅವಕಾಶ ಇದೆ.

(ಗೊಂದಲ)

ಅಧ್ಯಕ್ಷರು.—ಯಾವುದನ್ನು ರೆಕಾರ್ಡ್ ಮಾಡಬೇಡಿ.

(ಗೊಂದಲ)

ಅಧ್ಯಕ್ಷರು.—ಏನೂ ರೆಕಾರ್ಡ್‌ಗೆ ಹೋಗುವುದಿಲ್ಲ. ದಯವಿಟ್ಟು ಕುಳಿತುಕೊಳ್ಳಿ. ಇಬ್ಬರೂ ಸಮಾಧಾನವಾಗಿರಿ. ತಾವು ಜವಾಬ್ದಾರಿ ಸ್ಥಾನದಲ್ಲಿರುವವರು. ನೀವೇ ಹೀಗೆ ಮಾಡಿದರೆ ಹೇಗೆ ? ನೀವು ನನ್ನ ಮೂಲಕ ಮಾತನಾಡಿ. ತಾವು ಐದು ನಿಮಿಷ ಸಮಾಧಾನವಾಗಿರಿ. ಮಾನ್ಯ ಬೊಮ್ಮಾಯಿ ಯವರೇ ಹೇಳಿ.

(ಗೊಂದಲ)

ಅಧ್ಯಕ್ಷರು.—ಈ ತರಹ ಮಾತನಾಡಿದರೆ ಏನೂ ರೆಕಾರ್ಡ್ ಆಗುವುದಿಲ್ಲ. ಯಾರು ಏನು ಹೇಳಿದರೂ ರೆಕಾರ್ಡಿಗೆ ಹೋಗುವುದಿಲ್ಲ. ಎಲ್ಲರೂ ಕುಳಿತುಕೊಳ್ಳಿ, ಮಾನ್ಯ ರಾಜಪರ್ಧನ್ ಅವರೇ ಸ್ವಲ್ಪ ಎಲ್ಲರಿಗೂ ಹೇಳಿ. ಮಾನ್ಯ ನಾರಾಯಣ್‌ಕುಮಾರ್‌ರವರೇ ಕುಳಿತುಕೊಳ್ಳಿ ಎಂದರೆ ಕುಳಿತು ಕೊಳ್ಳಬೇಕು.

ಶ್ರೀ ಎಸ್. ಆರ್. ಬೊಮ್ಮಾಯಿ.—ಈಗಾಗಲೇ ತಾವು ಅಪ್ಪಣೆ ಕೊಡಿಸಿದ್ದೀರಿ. ಅದರಂತೆ ಸೋಮವಾರದಿಂದ ಸಂಬಂಧಪಟ್ಟ ಎಲ್ಲಾ ಮಂತ್ರಿಗಳು ಈ ಮನೆಯಲ್ಲಿರಬೇಕೆಂಬುದನ್ನು ನಾವು ಒಪ್ಪಿ ಕೊಂಡಿದ್ದೇವೆ. ಒಪ್ಪಿದ ಮೇಲೆ ಪುನಃ ಅದೇ ಪ್ರಶ್ನೆಯನ್ನು ಎತ್ತಿ ವಿವರಣೆ ಕೇಳುತ್ತಾ ಹೋದರೆ ಸರಿ ಹೋಗುವುದಿಲ್ಲ. ತಾವು ಎದ್ದು ನಿಂತ ಮೇಲೂ ಸದಸ್ಯರು ಡಿಫೆಂಡ್ ಮಾಡಿಕೊಳ್ಳತಕ್ಕವರು ಯಾರು ಎಂಬುದನ್ನು ನೋಡಿಕೊಳ್ಳಲಿ. ಈ ಕಡೆಯವರಿರಲಿ, ಆ ಕಡೆಯವರಿರಲಿ ತಾವು ಎದ್ದು ನಿಂತ ಮೇಲೆ ಕುಳಿತುಕೊಳ್ಳತಕ್ಕ ಸೌಜನ್ಯ ತೋರಿಸದಿದ್ದರೆ, ತಮ್ಮ ಆದೇಶಕ್ಕೆ ತಲೆಬಾಗದೆ ಹೋದರೆ ಈ ಮನೆಯ ಕಾರ್ಯಕಲಾಪವನ್ನು ನಡೆಸುವುದು ಕಷ್ಟವಾಗುತ್ತದೆಂದು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ. ಮಂತ್ರಿಗಳು ಇರಲಿ, ಸದಸ್ಯರು ಇರಲಿ ಹಿರಿಯರು ಇರಲಿ, ಕಿರಿಯರು ಇರಲಿ ತಮ್ಮ ಆದೇಶವನ್ನು ಪಾಲನೆ ಮಾಡದಿದ್ದರೆ ಕಷ್ಟವಾಗುತ್ತದೆ ತಾವು ಎದ್ದು ನಿಂತ ಮೇಲೆ ಕುಳಿತುಕೊಳ್ಳುವ ಸೌಜನ್ಯವನ್ನು ತೋರಿಸತಕ್ಕದ್ದನ್ನು ಎರಡೂ ಕಡೆಯ ಸದಸ್ಯರು ಪರಿಪಾಲನೆ ಮಾಡಬೇಕು. ಸೋಮವಾರದಿಂದ ಸಂಬಂಧಪಟ್ಟ ಎಲ್ಲಾ ಮಂತ್ರಿಗಳು ಸಭೆಯಲ್ಲಿ ಇರುವುದಕ್ಕೆ ವ್ಯವಸ್ಥೆ ಮಾಡುತ್ತೇನೆ.

ಅಧ್ಯಕ್ಷರು.—ಮಾನ್ಯ ರಾಮಪ್ಪನವರೆ, ದಯವಿಟ್ಟು ಕುಳಿತುಕೊಳ್ಳಿ.

೭ ಮಂಗಳೂರು ಹತ್ತಿರ ಅಡ್ಯಾರ್ ಕಣ್ಣೂರ ಹತ್ತಿರು ಶರಾಬು ಅಂಗಡಿಯನ್ನು ತೆರೆಯದಂತೆ ನೋಡಿಕೊಳ್ಳುವುದು

ಶ್ರೀ ಬಿ. ಎಂ. ಇದಿನಬ್ಬ.—ಮಂಗಳೂರಿಗೆ ಸಮೀಪದ ಅಡ್ಯಾರ್ ಕಣ್ಣೂರು ಎಂಬಲ್ಲಿ ಒಂದು ಚೆಕ್‌ಪೋಸ್ಟ್ ಇದೆ. ಇಲ್ಲಿ ನೂರಾರು ವಾಹನಗಳು ನಿಲ್ಲಬೇಕಾಗಿದ್ದು ತಪಾಸಣೆ ಇರುವ ಸ್ಥಳ ಇಲ್ಲಿ ಬಹುಪಾಲು ಮುಸ್ಲಿಂ ಬಡವರು ವಾಸಿಸುತ್ತಾರೆ. ಇಲ್ಲಿ ಅರಬಿಕ್ ಶಾಲೆ, ಮಸೀದಿ ಕೂಡ ಇದೆ. ಇನ್ನಿತರ ಪೂಜಾ ಸ್ಥಳಗಳೂ ಇವೆ. ಇಲ್ಲಿ ಇದೀಗ ಶರಾಬು ಅಂಗಡಿಯೊಂದನ್ನು ತೆರೆಯುವ ಸಿದ್ಧತೆ ನಡೆಯುತ್ತಿದೆ ಎಂದು ತಿಳಿದಿದೆ. ಇಲ್ಲಿ ಶರಾಬು ಕೇಂದ್ರ ಆದರೆ ಮಸೀದಿ, ಅರಬಿಕ್ ಶಾಲೆ, ಇನ್ನಿತರ ಪೂಜಾ ಸ್ಥಳಗಳಿರುವುದರಿಂದ ಭಾರೀ ಗೊಂದಲ ಅನಾಹುತಗಳಾಗಬಹುದೆಂದು ವರದಿ ಬಂದಿದೆ. ಅಲ್ಲದೆ